## ಸುವಿಚಾರ

ಹೆಚ್ಚುತ್ತಿರುವ ಬಲಾತ್ಕಾರ ಪ್ರಕರಣಗಳನ್ನು ಗಮನಿಸಿದಾಗ ಗುಂಡನಿಗೆ ಹೊಳೆದ ಸುವಿಚಾರ, 'ಕೊರೊನಾ ವ್ಯಾಕ್ಸಿನ್‌ನನ್ನು ಮೂಕ ಪ್ರಾಣಿಗಳ ಮೇಲೇಕೆ ಪ್ರಯೋಗಿಸಿ ಪರೀಕ್ಷಿಸಬೇಕು? ಈ ಉದ್ದೇಶಗಳಿಗಾಗಿ ಬಲಾತ್ಕಾರಿಗಳನ್ನೇಕೆ ಉಪಯೋಗಿಸಿಕೊಳ್ಳಬಾರದು?

ಅಂತಾದಾಗ ಅವರಿಗೆ ಕಾರಾಗೃಹದಲ್ಲಿ ಪುಕ್ಕಟ್ಟೆ ಊಟ ತಿಂಡಿ ನೀಡಿ ಸಾಕುವ ಪ್ರಮೇಯವೂ ಬರುವುದಿಲ್ಲ!

## ದಢೂತಿ ಹೆಂಡತಿ

ವಿವಾಹಾನಂತರದ ಜೀವನದಲ್ಲಿ ಹೊಂದಾಣಿಕೆ ಅವಶ್ಯ ಎಂಬುದಾಗಿ ಎಲ್ಲರೂ ಹೇಳುವುದನ್ನು ಗುಂಡ ಮನಗಂಡಿದ್ದ.

ಆದರೆ ತನ್ನ ವೈವಾಹಿಕ ಜೀವನದಲ್ಲಿ ಸ್ಕೂಟರಿನ ಸೀಟನ್ನು ಪೂರ್ತಿಯಾಗಿ ತನ್ನ ಅರ್ಧಾಂಗಿಗೆ ಬಿಟ್ಟುಕೊಟ್ಟು ತಾನು ಫುಟ್‌ಬೋರ್ಡಿನಲ್ಲಿ ನಿಂತೇ ಸ್ಕೂಟರ್‌ನಲ್ಲಿ ಡಬಲ್ ರೈಡ್ ಸವಾರಿ ಮಾಡ ಬೇಕಾಗುತ್ತದೆ ಎಂದಾತ ಕನಸಿನಲ್ಲಿಯೂ ಊಹಿಸಿರಲಿಲ್ಲ!

## ಅರ್ಥ ವ್ಯವಸ್ಥೆಯ ರೂವಾರಿ!



ರಸ್ತೆಯಲ್ಲಿ ಓಲಾಡುತ್ತಾ ನಡೆಯುತ್ತಿದ್ದ ಕುಡುಕ ಗುಂಡನನ್ನು ಕಂಡು ಗೋಪಿ ಹೇಳಿದ, 'ಧ್ಯಾನವಿರಿಸಿ ನಡೆ ಮಾರಾಯ, ಎಲ್ಲಾದರೂ ಚರಂಡಿಯೊಳಗೆ ಬಿದ್ದು ಬಿಟ್ಟೀಯ...'

ಗುಂಡ ಪ್ರತಿಕ್ರಯಿಸಿದ, 'ನಾವು ದೇಶದ ಅರ್ಥ ವ್ಯವಸ್ಥೆಯನ್ನೇ ನಡೆಸುತ್ತಿದ್ದೇವೆ. ಅಂಥಾದ್ದರಲ್ಲಿ ನೀನು ನನಗೆ ನಡೆಯಲು ಕಲಿಸುತ್ತಿದ್ದೀಯೇನೋ?'

## ವ್ಯಾಖ್ಯಾನ

ಪುಂಡ: ರಾಗಿ ಮುದ್ದೆಯನ್ನು ನಾವು ಹೇಗೆ ಸೇವಿಸಬೇಕು?

ಗುಂಡ : ರಾಗಿ ಮುದ್ದೆಯನ್ನು ನಾವು ಉಪ್ಸಾರು ಅಥವಾ ಬಸ್ಸಾರಿನ ಜೊತೆಗೆ ಸೇವಿಸಬೇಕು.

ಪುಂಡ: ಉಪ್ಸಾರು ಎಂದರೇನು?

ಗುಂಡ: ಅದೊಂದು ರುಚಿಕರ ಸಾರು. ಅದರಲ್ಲಿ ಉಪ್ಪು ಸ್ವಲ್ಪ ಹೆಚ್ಚಾಗಿರುತ್ತದೆ.

ಪುಂಡ: ಹಾಗಾದರೆ ಬಸ್ಸಾರು?

ಗುಂಡ: ಅದೂ ರುಚಿಕರ ಸಾರು. ಆದರೆ ಅದರಲ್ಲಿ ಬಸ್ಸು ಇರುವುದಿಲ್ಲ!

## ಸಂಸ್ಕಾರ!



ಇಬ್ಬರು ಹೊಸ ಬೀಗರು ಜೊತೆಯಾಗಿ ಶರಾಬು ಸೇವಿಸುತ್ತಿದ್ದರು.

ವರನ ಅಪ್ಪ: ನೀರೆಷ್ಟು ಹಾಕಲಿ?

ವಧುವಿನ ಅಪ್ಪ: ನೀರು ಬೇಡ.

ವರನ ಅಪ್ಪ: ಅದೇಕೆ?

ವಧುವಿನ ಅಪ್ಪ: ನಮ್ಮ ವಾಡಿಕೆಯ ಪ್ರಕಾರ ಮಗಳ ಮನೆಯಲ್ಲಿ ನಾವು ನೀರು ಕುಡಿಯುವುದಿಲ್ಲ.

ವರನ ಅಪ್ಪ: ಹೌದೇ, ಅದೆಷ್ಟು ಸಂಸ್ಕಾರವಂತರಪ್ಪಾ ನೀವು...

## ಅಧಿಕ ಮಾಸ ವಿಶೇಷ

ಬ್ಯಾಂಕಿನ ಪಿಂಚಣಿ ವಿಭಾಗದ ಉದ್ಯೋಗಿಯೋರ್ವರು ಕಚೇರಿ ಅವಧಿಯಲ್ಲಿ ಎಚ್ಚರ ತಪ್ಪಿ ಬಿದ್ದು ಬಿಟ್ಟರು. ಸೂಕ್ತ ಉಪಚಾರದ ಬಳಿಕ ಅವರನ್ನು ಎಚ್ಚರಗೊಳಿಸಲಾಯಿತು. ಎಚ್ಚರ ತಪ್ಪಲು ಕಾರಣವೇನೆಂದು ವಿಭಾಗದ ಮುಖ್ಯಸ್ಥರು ವಿಚಾರಿಸಿದಾಗ ಆ ಉದ್ಯೋಗಿ ಎದುರಲ್ಲಿ ನಿಂತಿದ್ದ ವಯೋವೃದ್ಧ ಪಿಂಚಣಿದಾರರತ್ತ ಬೆರಳುಮಾಡಿ ಉಲಿದರು, 'ಅಧಿಕ ಮಾಸದ ಪೆನ್ಷನ್ ಈ ತಿಂಗಳ ಪಿಂಚಣಿ ಜೊತೆ ಕೊಡ್ತೀರಾ ಅಥವಾ ಬೇರೆಯೇ ಕಂತು ನೀಡುತ್ತೀರಾ ಎಂದು ಈ ಮನುಷ್ಯ ಕೇಳಿದ ಸರ್..!'



## ಸಕಾರಣ

ತವರು ಮನೆಗೆ ಹೋಗಿದ್ದ ಪತ್ನಿ ಫೋನಾಯಿಸಿ, 'ನೀವೀಗಲೇ ಬಂದು ನನ್ನನ್ನು ಕರೆದುಕೊಂಡು ಹೋಗಿ' ಎಂದು ಪತಿಗೆ ತಿಳಿಸಿದಳು.

'ಇನ್ನೂ ಸ್ವಲ್ಪ ದಿನ ಅಲ್ಲೇ ಇದ್ದು ಬಿಡು ಕಣೆ' ಪತಿ ಸಲಹೆಯಿತ್ತ.

ತಕ್ಷಣ ಪತ್ನಿ ವೈಯಾರದಿಂದ 'ಇಲ್ಲ ರೀ... ಈಗಾಗಲೇ ಅಣ್ಣ, ಅತ್ತಿಗೆ, ತಂಗಿ, ಅಮ್ಮ, ಅಪ್ಪನ ಜೊತೆ ಎರಡ್ಮೂರು ಬಾರಿ ಜಗಳ ಆಡಿಯಾಯಿತು. ಆದರೆ ನಿಮ್ಮ ಜೊತೆ ಜಗಳವಾಡಿದಷ್ಟು ಮಜಾ ಯಾರ ಜೊತೆಯೂ ಸಿಗುವುದಿಲ್ಲ ಕಣ್ರೀ..' ಎಂದಳು!

## ಬಾಕಿ ಸಂದಾಯ

ಜಿಪುಣಾಗ್ರೇಸರ ಗುಂಡ ಮಧ್ಯಾಹ್ನ ಊಟದ ನಂತರ ತೆಗೆದ ಸಣ್ಣ ನಿದ್ದೆಯಲ್ಲಿ ಒಮ್ಮೆ ಕಿಸಕ್ಕೆಂದು ನಕ್ಕು ಸುಮ್ಮನಾದ.

ಎಚ್ಚರವಾದ ಬಳಿಕ ಪತ್ನಿ ವಿಚಾರಿಸಿದಳು, 'ಯಾಕ್ರೀ ನಿದ್ದೆಯಲ್ಲಿ ನಗುತ್ತಿದ್ದಿರಿ?'

ಗುಂಡ ಉತ್ತರಿಸಿದ 'ನಮ್ಮ ಅಂಗಡಿಗೆ ಗ್ರಾಹಕರೊಬ್ಬನಿಂದ ಬರಬೇಕಿದ್ದ ಬಾಕಿ ಹಣ ಸಂದಾಯವಾದಂತೆ ಕನಸು ಬಿತ್ತು ಕಣೆ!'

## ವೃದ್ಧರ ವರಸೆ

ಮುದುಕ ಮದುಕಿಯ ಆ ಜೋಡಿ ಹೋಟೆಲಿಗೆ ಬಂದು ವೇಟರನ್ನು ಕರೆದು ತಮಗೆ ಬೇಕಿದ್ದ ತಿಂಡಿ ಆರ್ಡರ್ ಮಾಡಿದರು.

ಮೊದಲು ಮುದುಕ ತಿಂದ ಮತ್ತು ಮುದುಕಿ ಬಿಲ್ ತೆತ್ತಳು. ಬಳಿಕ ಮುದುಕಿ ತಿಂದಳು ಮತ್ತು ಮುದುಕ ಬಿಲ್ ತೆತ್ತ.

ಅಚ್ಚರಿಗೊಂಡ ವೇಟರ್ ವಿಚಾರಿಸಿದ, ನಿಮ್ಮಿಬ್ಬರೊಳಗೆ ಇಷ್ಟೊಂದು ಅನ್ಯೋನ್ಯತೆಯಿರುವಾಗ ನೀವೇಕೆ ಜೊತೆಯಾಗಿ ತಿಂಡಿ ತಿನ್ನಲಿಲ್ಲ?

ನಮ್ಮೊಳಗಿನ ಪ್ರೀತಿ ಅಂತಿಂಥಾದ್ದಲ್ಲ; ಒಂದೇ ಹಲ್ಲಿನ ಸೆಟ್ಟನ್ನು ಇಬ್ಬರೂ ಬಳಸುವಷ್ಟು ಪ್ರೀತಿ ನಮ್ಮೊಳಗೆ ಉಕ್ಕುತ್ತಿದೆ ಕಣಯ್ಯಾ, ಅದೆಲ್ಲಾ ನಿನಗರ್ಥವಾಗುವುದಿಲ್ಲ. ಎಂದು ಹೇಳಿ ಹಿರಿಯರು ನಿಧಾನವಾಗಿ ಹೊರ ನಡೆದರು!

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ.